ಮುಂದುವರಿದಳು. ಬಸ್‌ಸ್ಟಾಪಿಗೆ ಇನ್ನೂ ತುಸು ದೂರವಿತ್ತು. ಮಾದೇವಿ ಮೇಡಮ್ಮೋರನ್ನ ನಿಲ್ಲಿಸೆಂದು ಹುಡುಗನನ್ನು ಓಡಿಸಿದಳು. ಮಂಜ ಆಂಟೀ... ಆಂಟೀ... ಎಂದು ಕರೆಯತ್ತ ಹಿಂದೆಯೇ ಓಡಿದ. ಮತ್ತೆ ತಿರುಗಿ ನೋಡಿದ ಮೇಡಮ್ಮು ಸಮೀಪಿಸುತ್ತಿರುವ ಹುಡುಗ ತನ್ನನ್ನೇ ಕರೆಯುತ್ತಿದ್ದಾನೆಂದರಿವಾಗಿ ನಿಂತು ಏನೆಂಬಂತೆ ನೋಡಿದಳು. ಹುಡುಗ ಮಾದೇವಿಯತ್ತ ಕೈ ತೋರಿಸಿದ. ಅವನ ಬಲಗೈ ಮಣಿಗಂಟು ಸುತ್ತಿದ್ದ ಬ್ಯಾಂಡೇಜ್ ಡಾಳಾಗಿ ರಾಚಿತು. ಮಾಸಲು ನೀಲಿ ಬಿಳಿ ಚೌಕಳಿ ಅಂಗಿ ಅದಕ್ಕಿಂತಲೂ ಮಾಸಿ ಬೂದಿ ಹಿಡಿದಂತಾದ ನೀಲಿ ಚಡ್ಡಿ ತೊಟ್ಟಿದ್ದ ಹುಡುಗ. ಆತ ತೋರಿಸಿದಲ್ಲಿಗೆ ನೋಡಿದಳು. ದೇವಸ್ಥಾನದ ದ್ವಾರದ ಬಳಿ ಕೈಗಾಡಿ ಇಟ್ಟುಕೊಂಡು ಹೂ ಮಾರುವ ಹೆಂಗಸು. ಆಕೆ ನಿಲ್ಲು ಅನ್ನುವಂತೆ ಕೈ ಸನ್ನೆ ಮಾಡುತ್ತಿದ್ದಳು. ಈ ಅಜ್ಜಿ ಮೊಮ್ಮಗನನ್ನಟ್ಟಿ ಹೂ ಕೊಳ್ಳಲು ಪೀಡಿಸುತ್ತಿದ್ದಾಳೆ ಅನಿಸಿತೇನೋ ಅವಳಿಗೆ.

"ನಂಗೆ ಹೂವ ಬೇಡಪ್ಪ" ಅಂದಳು.

"ಅಜ್ಜಿ ನಿಮ್ತಾವ ಬೇರೆ ಏನೋ ಹೇಳ್ಬೇಕಂತ್ರೀ" ಅಂದ.

"ಮೇಡಮ್ತಾವ ನಾ ಮಾತಾಡ್ತೀನ್ಲೇ. ನೀ ಬಾ ಇಲ್ಲಿ ನಿಂತ್ಕ." ಅಜ್ಜಿ ಹುಡುಗನಿಗೆ ಅಲ್ಲಿಂದಲೇ ಕೂಗಿ ಹೇಳಿದಳು. ಪೀಚಲು ಹುಡುಗ ಮತ್ತೆ ಓಡಿದ. ಹೆಂಗಸು ಅವಳತ್ತ ಬಂದಳು. ಕಪ್ಪಗೆ ಹೊಳೆಯುವ ದೊಡ್ಡ ಮುಖ. ಆ ಮುಖಾಕೃತಿಗೆ ಹೊಂದುವಂತ ಕೆಂಪು ಬಿಂದಿ. ಮಾಸಲು ಸೀರೆ. ಕೈಯಲ್ಲಿ ಬಣ್ಣ ಬಣ್ಣದ ಗಾಜಿನ ಬಳೆಗಳು. ಬಿಗಿದು ಕಟ್ಟಿದ ಸರಿಗೆಯಂತ ಗುಂಗುರು ತುರುಬು. ತಂಬಾಕು ತಿನ್ನುತ್ತಲೇ ಇರುವವಳೆಂಬಂತ ಕೆಂಪು ಬಾಯಿ. ವಯಸ್ಸು ಐವತ್ತೈದರೊಳಗಿನದಿರಬಹುದು ಅನಿಸಿತು. ಆದರೂ ಒಂತರಾ ದೃಢ ಶರೀರ. ಆಕೆ ಸಮೀಪಿಸಿದಾಗ ಇವಳನ್ನೆಲ್ಲೊ ನೋಡಿರುವೆ ಅನಿಸಿತು.

